


ಭಾರತದ ವಿರುದ್ಧ ಇತ್ತೀಚಿನ ಟಿ–20 ಸರಣಿ ಗೆದ್ದ ಖುಷಿಯಲ್ಲಿ ವಿಂಡೀಸ್ ಕಲಿಗಳು

ಮಂಡಿಯೂರುವುದು ಹುಬ್ಬೇರಿಸುವ ಸಂಗತಿಯೇ. ಆದರೆ, ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್, 'ಸೋತಿದ್ದನ್ನು ಅವಮಾನ ಎಂದೇನೂ ಭಾವಿಸಬೇಕಿಲ್ಲ' ಎಂದು ಹೇಳಿರುವುದು ಸರಿಯಾಗಿಯೇ ಇದೆ.

ಚುಟುಕು ಕ್ರಿಕೆಟ್‌ನಲ್ಲಿ ಬೌಂಡರಿಯ ಗಡಿ ಅರವತ್ತು ಚಿಲ್ಲರೆ ಮೀಟರ್‌ಗಳಷ್ಟೆ ಆಗಿರುತ್ತದೆ. ವಿಂಡೀಸರ ಬಾಹುಬಲ ಎಂಥದೆನ್ನುವುದು ಮೊದಲಿನಿಂದಲೂ ನಮಗೆ ಗೊತ್ತಿದೆ. ಅಲ್ಲಿ ವರ್ಷಗಳ ಹಿಂದೆ ವಿವಿಯನ್ ರಿಚರ್ಡ್ಸ್ ತರಹದ ಪರಮ ದೈತ್ಯ ಬ್ಯಾಟ್ಸ್‌ಮನ್ ಭುಜಬಲ ಪರಾಕ್ರಮ ತೋರುತ್ತಿದ್ದರೆ, ಗಾರ್ಡನ್ ಗ್ರೀನಿಜ್ ರೀತಿಯ ತಣ್ಣಗಿನ ಬ್ಯಾಟ್ಸ್‌ಮನ್ ಕೂಡ ಇರುತ್ತಿದ್ದುದನ್ನು ಕಂಡಿದ್ದೇವೆ. ಪೊಲಾರ್ಡ್ ರಾಕ್ಷಸೀ ದೇಹವನ್ನು ನೋಡಿದ ನಮಗೆ ನಿಕೊಲಸ್ ಪೂರನ್ ನಮ್ಮದೇ ದೇಶದ ಇನ್ನೊಬ್ಬ ಆಟಗಾರನಂತೆಯೇ ಕಾಣಿಸುತ್ತಾರಲ್ಲವೆ? ಅವರ ಎದುರಲ್ಲಿ ನಿಂತ ಕಿಂಗ್ ತೋಳುಗಳನ್ನು ಕಂಡರೆ, ಪೂರನ್ ಕೂಡ ಬೆಚ್ಚಲೇಬೇಕು. ಇದೇ ಕಿಂಗ್ ಜತೆ ಇನಿಂಗ್ಸ್ ಪ್ರಾರಂಭಿಸುವ ಕೈಲ್ ಮೇಯರ್ಸ್ ನೋಡಿದರೆ



ಭಲೇ ಜೋಡಿ: ಚೇಸ್ ಮತ್ತು ಹೋಲ್ಡರ್

ಆ್ಯಂಡ್ರೆ ಫ್ಲೆಚರ್ ನೆನಪಾಗುತ್ತಾರೆ. 2016ರ ವಿಶ್ವಕಪ್ ಆಡಿದ ತಂಡದಲ್ಲಿ ಫ್ಲೆಚರ್ ಮಿಂಚಿದ್ದನ್ನು ನಾವು ನೆನಪಿಸಿಕೊಳ್ಳಬಹುದು.

ಆ ವಿಶ್ವಕಪ್ ಗೆದ್ದಮೇಲೆ ಫ್ಲೆಚರ್ ತಮ್ಮ ತಂಡದ ಆಟಗಾರರ ಮನೋಬಲ–ದೇಹಬಲವನ್ನು ಬಿಡಿಬಿಡಿಯಾಗಿ ತೆರೆದಿಟ್ಟಿದ್ದರು. ಅದರ ಸಾರಾಂಶ ಹೀಗಿದೆ: 'ಚುಟುಕು ಕ್ರಿಕೆಟ್‌ನಲ್ಲಿ ಚೆಂಡನ್ನು ಜೋರಾಗಿ ಹೊಡೆಯುವವರಿಗೆ ಬೇಡಿಕೆ. ಆ ಸಾಮರ್ಥ್ಯ ವಿಂಡೀಸ್‌ನ ಬಹುತೇಕ ಆಟಗಾರರಿಗೆ ಇದೆ. ಭುಜಬಲದ ಜತೆಗೆ ಕೈ ಹಾಗೂ ಕಣ್ಣಿನ ಹೊಂದಾಣಿಕೆ ಕೆಲವರಿಗೆ ಇದೆ. ಪ್ರಮುಖ ಆಟಗಾರರಿಗೆ ಕೌಶಲದ ಬಲವಿದೆ. ದೈಹಿಕವಾಗಿ ಅತಿ ಎತ್ತರ, ಗಾತ್ರದವರಲ್ಲದ ಆಟಗಾರರು ಇಂತಹ ಕೌಶಲದಿಂದ ಸಿಕ್ಸರ್ ಹೊಡೆಯಬಲ್ಲರು. ದೈತ್ಯರು ಬೀಸುವ ಬ್ಯಾಟ್‌ಗೆ ಚೆಂಡು ಸಿಕ್ಕಿದರೆ ಮಿಸ್‌ಟೈಮ್ ಆದರೂ ಸಿಕ್ಸ್ ಹೋಗುವ ಸಾಧ್ಯತೆ ಹೆಚ್ಚು. ಇದುವೇ ನಮಗೆ ವರದಾನವಾಯಿತು.' ಇದೇ ಮಾತನ್ನು 2016ರ ವಿಶ್ವಕಪ್‌ನ ಫೈನಲ್‌ನಲ್ಲಿ 'ಪಂದ್ಯ ಪುರುಷೋತ್ತಮ'ರಾಗಿದ್ದ ಸ್ಯಾಮ್ಯುಯೆಲ್ಸ್ ಅನುಮೋದಿಸಿದ್ದರು.

ವೆಸ್ಟ್‌ಇಂಡೀಸ್ ಕ್ರಿಕೆಟ್‌ನ ಸಂಪೂರ್ಣ ಲಯ ಈಗ ಚುಟುಕು ಕ್ರಿಕೆಟ್‌ಗೇ ಮೀಸಲಿಟ್ಟಂತೆ ಆಗಿಬಿಟ್ಟಿದೆ. ಏಕದಿನ ಪಂದ್ಯಗಳು ಹಾಗೂ ಟೆಸ್ಟ್‌ಗಳು ಬಯಸುವ ಸಾವಧಾನ, ಸಂಯಮ ಬಹುತೇಕ ಆಟಗಾರರಿಗೆ ಇದ್ದಂತೆ ಇಲ್ಲ. ಇದೇ ಸಂಗತಿಯನ್ನು ಅಲ್ಲಿನ ವೇಗದ ಬೌಲರ್‌ಗಳಿಗೂ ಅನ್ವಯಿಸಬಹುದು. ಇತ್ತೀಚೆಗಷ್ಟೆ ಪ್ರತಿಭೆಯ ಮೂರ್ತಿಯಂತೆ ಕಂಡಿದ್ದ ವೇಗಿ ಅಲ್ಜಾರಿ ಜೋಸೆಫ್ ಯಾಕೋ ದಣಿದವರಂತೆ ಕಾಣುತ್ತಾರೆ. ಅನುಭವ ಬೆನ್ನಿಗಿಕ್ಕಿಕೊಂಡೂ ಜೇಸನ್ ಹೋಲ್ಡರ್ ಎಸೆತಗಳಲ್ಲಿ ಮೊದಲಿನ ಸ್ವಿಂಗ್ ಇಲ್ಲ. ಕೊನೆಯ ಟ್ವೆಂಟಿ20 ಪಂದ್ಯದಲ್ಲಿ ಅವರು ಎರಡು ವಿಕೆಟ್ ಪಡೆದರೆನ್ನುವುದು ಬೇರೆ ಮಾತು. ರೋಸ್ಟನ್ ಚೇಸ್ ತರಹದ ಆಲ್‌ರೌಂಡರ್ ಮಾಡುವ ಆಫ್‌ಬ್ರೇಕ್‌ಗಳು ವಿಂಡೀಸ್ ಪಾಲಿಗೀಗ ಬೆಳ್ಳಿಮಿಂಚು. ಅಕೀಲ್ ಹೊಸೇನ್ ಎಡಗೈ ಸಾಂಪ್ರದಾಯಿಕ ಬೌಲಿಂಗ್ ಮೂಲಕವೇ ಕೊನೆಯ ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸಿದ ತಂತ್ರ ಕೂಡ ಆಸಕ್ತಿಕರ. ಅದಕ್ಕೆ ಸತ್ಫಲವೇ ದೊರೆತು, ಜೈಸ್ವಾಲ್, ಶುಭಮನ್ ಗಿಲ್ ಇಬ್ಬರೂ ಔಟಾಗಿ ಹೋದದ್ದನ್ನು ಕಂಡೆವು. ಬ್ಯಾಟಿಂಗ್‌ನಲ್ಲಿ ಹೆಟ್ಮೇಯರ್ ವಿಫಲರಾದರೂ ಪೂರನ್ ಲಯದಲ್ಲಿಯೇ ಇದ್ದಾರೆ.

ಎರಡು ಸಲ ಟ್ವೆಂಟಿ20 ವಿಶ್ವಕಪ್ ಗೆದ್ದಿರುವ ವೆಸ್ಟ್‌ಇಂಡೀಸ್ ತಂಡದ ಸಾಮರ್ಥ್ಯವನ್ನು ಆಗ ಫಿಸಿಷಿಯನ್ ಆಗಿದ್ದ ರೊನಾಲ್ಡ್ ರೋಜರ್ಸ್ ವಿಡಿಯೊ ಸಂದರ್ಶನವೊಂದರಲ್ಲಿ ಎಳೆಎಳೆಯಾಗಿ ಹೇಳಿದ್ದರು. ವೆಸ್ಟ್‌ಇಂಡೀಸ್ ಆಟಗಾರರಲ್ಲಿ ಬಹುತೇಕರಿಗೆ ದೈತ್ಯ ದೇಹವಿರುತ್ತದೆ. ಆದರೆ, ಆ ದೇಹವನ್ನು ಹೊತ್ತು ನಡೆಯುವ ಕಾಲುಗಳಲ್ಲಿ ಕ್ರಿಕೆಟ್ ಆಟಕ್ಕೆ ಅಗತ್ಯವಿರುವಷ್ಟು ಕಸುವು ಇರುವುದಿಲ್ಲ. ಕಾಲುಗಳನ್ನು ಸದೃಢ ಮಾಡದೇ ಇದ್ದರೆ ದೀರ್ಘಕಾಲ ಕ್ರೀಸ್‌ನಲ್ಲಿ ಲಂಗರು ಹಾಕಿ ನಿಂತು ಆಡಲಾಗದು. ಇದನ್ನು ಮನಗಂಡೇ ವ್ಯಾಯಾಮ ಮಾಡಿಸುವುದನ್ನು ವರ್ಷಗಳಿಂದ ರೂಢಿಗೆ ತಂದಿದ್ದನ್ನು ರೊನಾಲ್ಡ್ ಹೆಮ್ಮೆಯಿಂದ ಹೇಳಿಕೊಂಡಿದ್ದರು.

ವಿಂಡೀಸ್ ತಂಡ ಇರುವುದೇ ಹಾಗೆ. ಅಲ್ಲಿ ಕ್ಲೈವ್ ಲಾಯ್ಡ್ ತರಹದ ಇಂಧನ ರಿಚರ್ಡ್ಸ್ ಎಂಬ ರಾಕೆಟ್‌ನ ಬೆಂಕಿ ಹೆಚ್ಚು ಮಾಡುತ್ತದೆ. ಬ್ರಯಾನ್ ಲಾರಾ ಚಿತ್ತಾಪಹಾರಿ ಆಟ ನೋಡುತ್ತಿರುವಾಗಲೇ ಕ್ರಿಸ್ ಗೇಲ್ ಎಂಬ ಪರಮ ದೈತ್ಯನ ಹೈವೋಲ್ಟೇಜ್ ನಗು ಕಾಣುತ್ತದೆ. ಕಿಂಗ್ ತರಹದ ಆಜಾನುಬಾಹು ಬೇಗ ಔಟಾಗಿ ಹೋದರೂ ಬಂದು ಮೈದಾನದ ಅಷ್ಟ ದಿಕ್ಕುಗಳಿಗೂ ಚೆಂಡನ್ನು ಹೊಡೆದಟ್ಟುವ ನಿಕೊಲಸ್ ಪೂರನ್ ತರಹದ ಸಿಕ್ಸ್‌ಪ್ಯಾಕ್ ಯುವಕ ಕಂಗೊಳಿಸುತ್ತಾನೆ. ಭಾರತದ ತಂಡದಲ್ಲಿ ಈ ರೀತಿಯ ಲಯವೊಂದು ಚುಟುಕು ಕ್ರಿಕೆಟ್‌ನಲ್ಲಿ ಕಾಣುತ್ತಿಲ್ಲ. ಹಾರ್ದಿಕ್ ಪಾಂಡ್ಯ ಹೈರಾಣಾದಂತೆ ಕಾಣುತ್ತಿದ್ದಾರೆ. ಯಜುವೇಂದ್ರ ಚಾಹಲ್ ಲೆಗ್‌ಸ್ಪಿನ್ ಅನ್ನು ಹೊಸ ಬ್ಯಾಟ್ಸ್‌ಮನ್‌ಗಳೂ ಅಂದಾಜು ಮಾಡಲಾರಂಭಿಸಿದ್ದಾರೆ. ಗಿಲ್ ಅತ್ಯಾತ್ಮವಿಶ್ವಾಸ, ಸೂರ್ಯಕುಮಾರ್ ಯಾದವ್ ಅವರ ಅಡ್ಡ ಹೊಡೆಯುವ ಚಾಳಿಗೆ ವಿಂಡೀಸ್ ಬೌಲರ್‌ಗಳಲ್ಲೂ ಪ್ರತ್ಯುತ್ತರ ಇದೆ ಎನ್ನುವುದನ್ನು ಕಂಡೆವು. ಕೊನೆಯ ಪಂದ್ಯದಲ್ಲಿ ರೊಮಾರಿಯೊ ಶೆಫರ್ಡ್ ಮಾಡಿದ ಸ್ಪೆಲ್ ಇದಕ್ಕೆ ಪುಷ್ಟಿ ಕೊಡುತ್ತದೆ. ಇವೆಲ್ಲವೂ ಭಾರತ ತಂಡಕ್ಕೆ ಕಲಿಕೆಯ ಪ್ರಾತ್ಯಕ್ಷಿಕೆಯೇ ಹೌದು.

ಪ್ರತಿಕ್ರಿಯಿಸಿ: feedback@sudha.co.in